ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

15

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE 23/7/2020

# ಸುಪ್ರೀಂ ಮೆಟ್ಟಿಲೇರಿದ ರಾಜಸ್ಥಾನ ಕಲಹ

## ಸಚಿನ್ ಅನರ್ಹತೆ ಪ್ರಕ್ರಿಯೆಗೆ ತಡೆ ಆದೇಶ ಸುಪ್ರೀಂನಲ್ಲಿ ಪ್ರಶ್ನಿಸಿದ ಸ್ಪೀಕರ್

ನವದೆಹಲಿ: ಸಚಿನ್ ಪೈಲಟ್ ಸೇರಿದಂತೆ 19 ಬಂಡುಕೋರ ಕಾಂಗ್ರೆಸ್ ಶಾಸಕರ ವಿರುದ್ಧ ಜುಲೈ 24ರವರೆಗೆ ಯಾವುದೇ ಅನರ್ಹತೆ ಪ್ರಕ್ರಿಯೆ ನಡೆಸಕೂಡದು ಎಂಬ ರಾಜಸ್ಥಾನ ಹೈಕೋರ್ಟ್ ಆದೇಶದ ವಿರುದ್ಧ ವಿಧಾನಸಭಾ ಅಧ್ಯಕ್ಷ ಸಿ.ಪಿ. ಜೋಶಿ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಅನರ್ಹತೆ ಎಂಬುದು ವಿಧಾನಸಭೆಯ ಕಲಾಪಕ್ಕೆ ಸಂಬಂಧಿಸಿದ ವಿಚಾರ. ಈ ವಿಷಯದಲ್ಲಿ ಹೈಕೋರ್ಟ್ ಮಧ್ಯಪ್ರವೇಶಿಸುಂತಿಲ್ಲ. ಇದರಿಂದ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಯಾಗುತ್ತದೆ ಎಂದು ಅರ್ಜಿಯಲ್ಲಿ ಜೋಶಿ ಅವರು ವಾದಿಸಿದ್ದು, ಹೈಕೋರ್ಟ್ ಆದೇಶಕ್ಕೆ ಮಧ್ಯಂತರ ತಡೆ ಕೋರಿದ್ದಾರೆ.

ಸಂವಿಧಾನ ವಿಧಿಸಿರುವ ಲಕ್ಷ್ಮಣ ರೇಖೆಯನ್ನು ಯಾರೂ ದಾಟದಂತೆ ನೋಡಿಕೊಳ್ಳುವುದು ಸುಪ್ರೀಂ ಕೋರ್ಟ್‌ನ ಕರ್ತವ್ಯ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ. ಈ ಅರ್ಜಿ ಗುರುವಾರ ವಿಚಾರಣೆಗೆ ಬರಲಿದೆ.

## ಗೆಹ್ಲೋಟ್ ಅಣ್ಣನ ಕಚೇರಿ ಮೇಲೆ ಇಡಿ ದಾಳಿ

ಜೈಪುರ: ರಾಜಸ್ಥಾನದಲ್ಲಿ ರಾಜಕೀಯ ಬಿಕ್ಕಟ್ಟು ಜಾರಿಯಲ್ಲಿರುವಾಗಲೇ, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರ ಸಹೋದರನ ಕಂಪನಿ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ದಾಳಿ ನಡೆಸಿದೆ. ರಸಗೊಬ್ಬರ ಹಗರಣದಲ್ಲಿ ಭಾಗಿಯಾಗಿರುವ ಆರೋಪ ಹೊತ್ತಿರುವ ಅಗ್ರಸೇನ್ ಗೆಹ್ಲೋಟ್ ಅವರ ವಿವಿಧ ಕಚೇರಿ ಮೇಲೆ ಇಡಿ ದಾಳಿ ನಡೆಸಿದೆ. ರಾಜಸ್ಥಾನದ 6, ಗುಜರಾತ್‌ನ 4, ಪ.ಬಂಗಾಳದ 2 ಕಡೆ ದಾಳಿ ನಡೆಸಲಾಗಿದೆ.

## ನಮ್ಮ ಅಹವಾಲು ಆಲಿಸಿ: ಪೈಲಟ್ ಅರ್ಜಿ

ನವದೆಹಲಿ: ಹೈಕೋರ್ಟ್ ಆದೇಶದ ವಿರುದ್ಧ ರಾಜಸ್ಥಾನ ಸ್ಪೀಕರ್ ಸಲ್ಲಿಸಿರುವ ಅರ್ಜಿಯ ಕುರಿತು ಯಾವುದೇ ತೀರ್ಪಿಗೆ ಮುನ್ನ ನಮ್ಮ ಅಹವಾಲನ್ನೂ ಆಲಿಸಿ ಎಂದು ಕೋರಿ ಸಚಿನ್ ಪೈಲಟ್ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

## ಕಾಂಗ್ರೆಸ್ ಶಾಸಕಗೆ ಪೈಲಟ್ ನೋಟಿಸ್

ಜೈಪುರ: ಬಿಜೆಪಿ ಸೇರಲು ಸಚಿನ್ ಪೈಲಟ್ ತಮಗೆ 35 ಕೋಟಿ ರು. ಆಫರ್ ನೀಡಿದ್ದರು ಎಂಬ ಹೇಳಿಕೆ ಸಂಬಂಧ ಕಾಂಗ್ರೆಸ್ ಶಾಸಕ ಗಿರಿರಾಜ್‌ಸಿಂಗ್ ಮಲಿಂಗಗೆ ಸಚಿನ್ ನೋಟಿಸ್ ರವಾನಿಸಿದ್ದಾರೆ. ಕ್ಷಮೆಯಾಚಿಸಿ, 1 ರು. ನೀಡಬೇಕೆಂದು ಎಚ್ಚರಿಸಿದ್ದಾರೆ.